ಈ ಯೋಜನೆಗಳು 15-20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವುದರಿಂದ ಪಂಪುಗಳ ಸವಕಳಿ ಬಂದು, ಸಾಮರ್ಥ್ಯ ಕಡಿಮೆಯಾಗಿರುವುದು.

94-95ನೇ ಸಾಲಿನ ಆಯವ್ಯಯದಲ್ಲಿ ಹಮ್ಮಿಗಿ ಏತ ನೀರಾವರಿ ಯೋಜನೆಯ ಪುನರ್ ಸ್ಥಿತಿಗೆ ತರುವ ಕಾಮಗಾರಿಯನ್ನು 2.00 ಲಕ್ಷ ರೂ.ಗಳ ಅನುದಾನದೊಂದಿಗೆ ಇಡಿಗಂಟಿನಲ್ಲಿ ಸೇರಿಸಲಾಗಿದೆ. ಪಂಪುಗಳ ಬದಲಾವಣೆಗೆ ಅನುದಾನದ ಲಭ್ಯತೆಯ ಮೇಲೆ ಆದ್ಯತೆ ನೀಡಲಾಗುವುದು.

ನ್ಯಾರೋಗೇಜ್ ರೈಲು ಮಾರ್ಗವನ್ನು ಬ್ರಾಡ್ ಗೇಜ್‌ಗೆ ಪರಿವರ್ತನೆ

531 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಗಾರುಪೇಟೆಯಿಂದ ಕೋಲಾರ ಚಿಂತಾಮಣಿ, ಚಿಕ್ಕಬಳ್ಳಾಪುರದ ಮಾರ್ಗವಾಗಿ ಬೆಂಗಳೂರಿಗೆ ಇರುವ ನ್ಯಾರೋಗೇಜ್ ರೈಲು ಮಾರ್ಗವನ್ನು ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡುವ ಕಾರ್ಯವನ್ನು ತೆಗೆದುಕೊಳ್ಳಲು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಅದರ ವಿವರಗಳೇನು?

ಇ) ರಾಜ್ಯದಲ್ಲಿ ಮೀಟರ್ ಗೇಜ್‌ನಿಂದ ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡಬೇಕೆಂದಿರುವ ರೈಲು ಮಾರ್ಗಗಳಾವುವು?

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು)

ಅ) ಇಲ್ಲ

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮಾಹಿತಿ ಲಭ್ಯವಿರುವುದಿಲ್ಲ.

ಚಿಕ್ಕ ದೇವರಾಯನಾಲಾ ಪ್ರದೇಶಗಳಲ್ಲಿ ಸೇತುವೆಗಳು ಕುಸಿದಿರುವುದು

97 ಶ್ರೀ ಡಿ.ಹಲಗೇಗೌಡ (ಪಾಂಡವಪುರ) ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಅಚ್ಚುಕಟ್ಟು ಪ್ರದೇಶದ ನದಿ ಕಾಲುವೆಗಳಲ್ಲಿ ಬಹುಮುಖ್ಯ ಕಾಲುವೆಯಾದ ಚಿಕ್ಕದೇವರ್‌ರಾಯ ನಾಲಾ ಪ್ರದೇಶಗಳಲ್ಲಿ ಹಳೆಯ ಸೇತುವೆಗಳು ಕುಸಿದು ಆ ಪ್ರದೇಶದ ಜನ ಜಾನುವಾರು, ವ್ಯವಸಾಯ ಮತ್ತು ಸಾಗಾಣಿಕೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅದರಲ್ಲೂ ಪಾಂಡವಪುರ ತಾಲ್ಲೂಕಿನ ಹರವು ಮತ್ತು ಪುಟ್ಟಸೋಮನಹಳ್ಳಿ ಗ್ರಾಮಗಳ ಬಳಿ ಕಾಲುವೆಯ 5 ಮತ್ತು 25ನೇ ಮೈಲಿಗಳಲ್ಲಿರುವ ಸೇತುವೆಗಳು ಕುಸಿದು ಬಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು

ಆ) ಹೌದು

ಇ) ಕುಸಿದಿರುವ ಸೇತುವೆಗಳ ಜಾಗದಲ್ಲಿ ಹೊಸ ಸೇತುವೆಗಳನ್ನು ಕಟ್ಟಲು ಅಂದಾಜನ್ನು ತಯಾರಿಸಲಾಗುತ್ತಿದ್ದು ಈ ಕಾಮಗಾರಿಗಳನ್ನು ಕಾವೇರಿ ಅಣೆಕಟ್ಟು ನಾಲೆಗಳ ಆಧುನೀಕರಣ ಯೋಜನೆಯಡಿ ಕೈಗೊಳ್ಳುವ ಕಾರ್ಯಕ್ರಮವಿದೆ.